AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ವೈದೇಹಿಯವರ ಕಥಾ ಸಾಹಿತ್ಯದ ವಿಶಿಷ್ಟತೆ

**ಚಂದನಾ ಕೆ. ಎಸ್.**
ಸಂಶೋಧನಾ ವಿದ್ಯಾರ್ಥಿನಿ
ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ – 574199.
ದೂರವಾಣಿ ಸಂಖ್ಯೆ – **8762162678**
**E mail:** cdnanoohya@gmail.com

ನವ್ಯೋತ್ತರ ಕಾಲಘಟ್ಟದಲ್ಲಿ ಸಾಹಿತ್ಯ ರಚನೆಗೆ ತೊಡಗಿ ಮೇಲ್ವರ್ಗವೆಂದು ಹೆಸರಾದ ಬ್ರಾಹ್ಮಣವರ್ಗದಲ್ಲೂ ಇರುವ ಹಲವು ಬಿಕ್ಕಟ್ಟುಗಳನ್ನು, ನಮ್ಮ ಸಮಾಜದ ಮಹಿಳೆಯರು ಎದುರಿಸುವ ಸಮಸ್ಯೆಗಳನ್ನೂ ತಮ್ಮ ಕತೆಗಳಲ್ಲಿ ತಂದವರು 'ವೈದೇಹಿ' ಎಂಬ ಕಾವ್ಯನಾಮ ಹೊಂದಿದ ಜಾನಕಿ ಶ್ರೀನಿವಾಸಮೂರ್ತಿಯವರು. 1979ರಿಂದ ಸಾಹಿತ್ಯ ರಚನೆಯನ್ನಾರಂಭಿಸಿ ಕತೆ, ಕಾದಂಬರಿ, ಕವಿತೆ, ಮಕ್ಕಳ ನಾಟಕ, ಪ್ರಬಂಧ, ಅಂಕಣ ಬರಹ, ಆತ್ಮಚರಿತ್ರೆ ನಿರೂಪಣೆ ಮುಂತಾದ ಹಲವು ಸಾಹಿತ್ಯ ಪ್ರಕಾರಗಳಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡಿರುವ ವೈದೇಹಿಯವರು ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕನ್ನಡದ ಮೂವರು ಲೇಖಕಿಯರಲ್ಲಿ ಎರಡನೆಯವರು. ತಾವು ಕಂಡ ಬದುಕುಗಳನ್ನೇ ಸಾಹಿತ್ಯದಲ್ಲಿ ಕತೆಯಾಗಿ ರಚಿಸುವ ಕಾರಣದಿಂದ ಕಲ್ಪಿತ ಕಪ್ಪು ಬಿಳುಪು ಪಾತ್ರಗಳ ನಾಯಕ ನಾಯಕಿಯರನ್ನು ಸೃಷ್ಟಿಸಿ ಓದುಗರನ್ನೂ ಭ್ರಮೆಯಲ್ಲಿ ತೇಲಿಸುವ ಬಹುತೇಕ ಬರಹಗಾರ್ತಿಯರ ಬರಹಗಳಿಗಿಂತ ವೈದೇಹಿಯವರ ಬರಹವು ಭಿನ್ನವಾಗಿದ್ದು ಸಮಾಜಮುಖಿಯಾಗಿದೆ.

## ಕತೆಗಳ ಅಧ್ಯಯನದ ಹಿಂದಿನ ತಾತ್ವಿಕತೆ

ನಿಜಘಟನೆಗಳನ್ನಾಧರಿಸಿ ಹೆಣ್ಣಿನ ಜೀವನ ಚಿತ್ರಿಸುವ ವೈದೇಹಿಯವರು ಕ್ರಿ.ಶ 2000 ಮತ್ತು ಆನಂತರ ರಚಿಸಿರುವ **'ಅಮ್ಮಚ್ಚಿಯೆಂಬ** ನೆನಪು' (2000), **'ಕ್ರೌಂಚ** ಪಕ್ಷಿಗಳು' (2005) ಮತ್ತು **'ಕತೆ ಕತೆ ಕಾರಣ'** (2016) ಎಂಬ ಕಥಾ ಸಂಕಲನಗಳಿಂದ ಆಯ್ದ **'ಅಂತರಾಳದ ಬದುಕು'**, 'ವಾಣಿಮಾಯಿ', **'ಅಮ್ಮಚ್ಚಿಯೆಂ**ಬ ನೆನಪು', 'ನಟಿ', 'ಸಬಿತಾ', **'ಕ್ರೌಂಚ** ಪಕ್ಷಿಗಳು' ಮತ್ತು **'ಕತೆ ಕತೆ ಕಾರಣ'** ಎಂಬ ಏಳು ಕತೆಗಳನ್ನು ಅಧ್ಯಯನಕ್ಕಾಗಿ ಆರಿಸಲಾಗಿದೆ. 'ಅಂತರಾಳದ ಬದುಕು' ಕತೆಯ ಚಿಕ್ಕಪ್ಪ–ಚಿಕ್ಕಮ್ಮನಂಥವರು, 'ನಟಿ' ಕತೆಯ ಕೇಂದ್ರಪಾತ್ರವಾದ ರತ್ನ, ತಮ್ಮದೇ ಹೆಸರನ್ನು ಕಥಾ ಶೀರ್ಷಿಕೆಗಳಾಗಿ ಹೊಂದಿದ ವಾಣಿಮಾಯಿ ಮತ್ತು ಅಮ್ಮಚ್ಚಿಯರು, ಖಳನಾಯಕರಾದ ವೆಂಕಪ್ಪಯ್ಯ ಮತ್ತು ನರಸಿಂಹ, ಉಳಿದವರಲ್ಲಿ ಕೊರತೆ ಹುಡುಕುವ 'ಸಬಿತಾ' ಕತೆಯ ಸಬಿತಳ ಪಾತ್ರ, 'ಕ್ರೌಂಚ ಪಕ್ಷಿಗಳು' ಕತೆಯ ಭಟ್ಟರು ಮತ್ತು ಅವರ ಮೊದಲ ಹೆಂಡತಿ, 'ಕತೆ ಕತೆ ಕಾರಣ' ಕತೆಯ ಸರಸೋತತ್ತೆಯ ಪಾತ್ರಗಳು ಓದುಗರಿಗೆ ಅವರ ಜೀವನದ ಯಾವುದೋ ಒಂದು ಘಳಿಗೆಯಲ್ಲಿ ಕಂಡಿರಬಹುದಾದ ವ್ಯಕ್ತಿಗಳೇ ಆಗಿರುತ್ತಾರೆ. ಮತ್ತು ಸಾಮಾನ್ಯ ಮನುಷ್ಯನಲ್ಲಿರುವ ಸಾಮಾನ್ಯ ಗುಣಗಳನ್ನೇ ವೈದೇಹಿ ತಮ್ಮ ಕತೆಗಳಲ್ಲಿನ ಈ ಪಾತ್ರಗಳಲ್ಲಿ ತಂದಿದ್ದಾರೆ.

## ವಿಭಿನ್ನ ಸ್ತ್ರೀಮಾದರಿಗಳ ರಚನೆ ಮತ್ತು ಸೂಕ್ತ ಸನ್ನಿವೇಶ ಸೃಷ್ಟಿ

ವೈದೇಹಿಯವರ ಕಥಾಸಾಹಿತ್ಯದಲ್ಲಿರುವ ಬಹುತೇಕ ಕತೆಗಳು ಸಂಸಾರಿ ಸ್ತ್ರೀಯರ ಚಿತ್ರಣವನ್ನೇ ನೀಡುತ್ತವೆ. ಅಜ್ಜಿ, ಮೊಮ್ಮಗಳು, ಅಮ್ಮ, ದೊಡ್ಡಮ್ಮ, ಚಿಕ್ಕಮ್ಮ, ಅಕ್ಕ, ತಂಗಿ, ಅತ್ತೆ, ಸೊಸೆ, ನಾದಿನಿ ಮುಂತಾದ ವೈವಿಧ್ಯಮಯವಾದ, ಸಾಮಾಜಿಕವಾಗಿ ಹಲವು ಅಂತಸ್ತುಗಳಲ್ಲಿರುವ ಸ್ತ್ರೀಯರ ಕತೆಗಳನ್ನು ವಾಸ್ತವಿಕವಾಗಿ ವೈದೇಹಿ ಚಿತ್ರಿಸುತ್ತಾರೆ. ಇಲ್ಲಿನ ಹೆಚ್ಚಿನ ಕತೆಗಳು ಸಂಸಾರದೊಳಗಿನ ಘಟನೆಗಳನ್ನು ಆಧರಿಸಿದ್ದರೂ ಸಂಸಾರದೊಳಗಿನ ಘಟನೆಗಳ ಕುರಿತ ಪ್ರತೀ ಕಥಾವಸ್ತುವನ್ನೂ ಅವರು ವಿಭಿನ್ನವಾಗಿ ನಿರ್ವಹಿಸಿರುವ ರೀತಿ ಅಚ್ಚರಿ ತರುವಂತದ್ದು.

ತಮ್ಮ ಕತೆಗಳ ವಸ್ತು–ಪಾತ್ರಗಳಿಗೆ ತಕ್ಕಂತೆ ಸನ್ನಿವೇಶಗಳನ್ನು ರಚಿಸುವಲ್ಲಿ ವೈದೇಹಿಯವರು ನಿಪುಣರು. 'ಮರಗಿಡಬಳ್ಳಿ' ಕತೆಯ ಕೇಂದ್ರಪಾತ್ರ ಮಂದಕ್ಕ, 'ಒಂದು ಅಪರಾಧ ತನಿಖೆ' ಕತೆಯ ಸಾಂಪ್ರದಾಯಿಕ ಮನಸ್ಥಿತಿಯ ಕೆಲಸದಾಕೆ ಬಾಬಿ, ಮಾನಸಿಕ ಅಸ್ವಸ್ಥತೆಯ ಮೂಲಕವೇ ಸಮಾಜ ವಿಮರ್ಶೆ ಮಾಡುತ್ತಾ ಸ್ವಾತಂತ್ರ್ಯದ ದಾರಿ ಕಂಡ 'ಅಕ್ಕು' ಕತೆಯ ಅಕ್ಕು, ಚಿಕ್ಕ ವಯಸ್ಸಿಗೇ ತಾಯಿಯಂತೆ ಮನೆಯೊಡತಿ ಶಾರದೆಯನ್ನು ನೋಡಿಕೊಂಡ 'ಅವಲಂಬಿತರು' ಕತೆಯ ಅಹಲ್ಯೆ, ತಮ್ಮ ಅಂತರಂಗದ ಪುಟಗಳನ್ನು ಒಂದೊಂದಾಗಿ ತಿರುಗಿಸುವ 'ಅಂತರಂಗದ ಪುಟ' ಕತೆಯೊಳಗಿನ ಅಚಲ, ಸರಿತ, ಸುಬ್ಬಿ, ಮಂಜು, ಆರತಿ ತಟ್ಟೆಯಿಂದಾಗಿ ಮನದ ತೋಲನ ಕಳೆದುಕೊಂಡ 'ಆರತಿ ತಟ್ಟೆ' ಕತೆಯ ಮೀನಾಕ್ಷತ್ತೆ, 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಕತೆಯಲ್ಲಿ ಸಾಂಪ್ರದಾಯಿಕ ಸ್ತ್ರೀಮಾದರಿಯ ಉದಾಹರಣೆಯಾದ ವಾಗತ್ತೆ, ಮದುವೆಯ ನೆನಪುಗಳನ್ನು ದಾಖಲಿಸುವ ಸಮಾಜಶಾಸ್ತ್ರಜ್ಞೆ, ಸಮಾಜಶಾಸ್ತ್ರಜ್ಞೆಯಂತೆಯೇ ಆಲೋಚಿಸುವ ಲತಾ, 'ವಾಣಿಮಾಯಿ' ಹಾಗೂ 'ಅಮ್ಮಚ್ಚಿಯೆಂಬ ನೆನಪು' ಕತೆಯ ಧೈರ್ಯವಂತೆ, ಸಾಹಸದ ಪಾತ್ರಗಳಾದ ವಾಣಿ ಮತ್ತು ಅಮ್ಮಚ್ಚಿ, 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕತೆಯ ಲಿಲ್ಲೀಬಾಯಿ, ಮುಂತಾದ ವೈವಿಧ್ಯಮಯ ಪಾತ್ರಗಳನ್ನು ವೈದೇಹಿ ಸೃಷ್ಟಿಸುತ್ತಾರೆ.

## ಸಮಕಾಲೀನ ವಾಸ್ತವತೆಯನ್ನು ಚಿತ್ರಿಸುವ ಕತೆಗಳು

ನಡೆದ ಘಟನೆಗಳನ್ನು ಆಧರಿಸಿಯೇ ಕತೆ ರಚಿಸಿದವರು ವೈದೇಹಿ. 'ತಾವು ಕಂಡ ಜೀವನಗಳನ್ನು ಕುರಿತ ಚಿಂತನೆಯೇ ತಮ್ಮ ಸಾಹಿತ್ಯ ರಚನೆಗೆ ಪ್ರೇರಣೆ. ಆ ಚಿಂತನೆಯ ಬೆಳಕಿನಲ್ಲಿ ಬದುಕಿನ ಸಂಕೀರ್ಣತೆಯನ್ನು ಬಿಡಿಸಿನೋಡಿ ಅರಿಯುವುದೇ ತನ್ನ ಸಾಹಿತ್ಯ ರಚನೆಯ ಉದ್ದೇಶ' ಎಂದವರು ಹೇಳುತ್ತಾರೆ. ವೈದೇಹಿ ಅವರು ರಚಿಸಿರುವ ಪಾತ್ರಗಳಲ್ಲಿ ಪ್ರಮುಖವಾಗಿ ತನ್ನ ಮನೆಯಲ್ಲಿ ಯಾರಾದರೂ ಸಂಬಂಧಿಕರ ಹುಡುಗಿಯರನ್ನು ಮನೆಯಲ್ಲಿ ಒಬ್ಬರಾದ ನಂತರ ಒಬ್ಬರನ್ನು ನಿರಂತರವಾಗಿ ಉಳಿಸಿಕೊಳ್ಳುವ ಮೂಲಕ ಗಂಡನ ಬಯಕೆಯಿಂದ ದೂರವಿರಲು ಬಯಸುವ 'ಅಂತರಾಳದ ಬದುಕು' ಕತೆಯ ಪ್ರೌಢ ವಯಸ್ಸಿನ ಚಿಕ್ಕಮ್ಮನ ಪಾತ್ರ, ಪ್ರತಿನಿತ್ಯ ಹೋಟೇಲಿಗೆ ಬರುತ್ತಿದ್ದ ಗಿರಾಕಿಗಳೇ ದೇಶ ವಿಭಜನೆಯ ಕಾಲದಲ್ಲಿ ತನ್ನ ಪತ್ನಿಯನ್ನು ಹೊತ್ತೊಯ್ದಾಗ ಆಕೆಯನ್ನು ಅನುಮಾನಿಸಿ ಮತ್ತೊಬ್ಬಳನ್ನು ಮದುವೆಯಾದ 'ಕ್ರೌಂಚ ಪಕ್ಷಿಗಳು' ಕತೆಯ ಭಟ್ಟರ ಪಾತ್ರ, ಸದಾ ಇನ್ನೊಬ್ಬರಲ್ಲಿ ತಪ್ಪು ಹುಡುಕುವ 'ಸಬಿತಾ' ಕತೆಯ ಸಬಿತಾಳ ಪಾತ್ರ, ಊರಿನವರೆಲ್ಲರ ಕತೆಯನ್ನೂ ಹೇಳುವ 'ಕತೆ ಕತೆ ಕಾರಣ'ದ ಸರಸೋತತ್ತೆ, ತಮ್ಮ ಸಮೀಪ ಬಂಧು ಅಥವಾ ಮನೆಯ ಸದಸ್ಯನಿಂದಲೇ ಶೋಷಣೆಗೊಳಗಾಗುವ ವಾಣಿಮಾಯಿ ಮತ್ತು ಅಮ್ಮಚ್ಚಿಯಂತಹಾ ಹೆಣ್ಮಕ್ಕಳು ಪ್ರತೀ ಸಮಾಜದಲ್ಲೂ, ಪ್ರತೀ ಕುಟುಂಬದಲ್ಲೂ ದೇಶ ಕಾಲಗಳನ್ನು ಮೀರಿ ಕಂಡುಬರುತ್ತಾರೆ. ಹೀಗಾಗಿಯೇ ವೈದೇಹಿಯವರು ಬರೆಯುವ ಕತೆಗಳು ಜನಸಾಮಾನ್ಯರ ಕತೆಗಳಾಗಿರುತ್ತವೆ.

### ಕತೆಗಳಲ್ಲಿನ ಕಾವ್ಯಗುಣ

ವೈದೇಹಿಯವರ ಕತೆಗಳಲ್ಲಿನ ಕಾವ್ಯಗುಣವು ಓದುಗರ ಗಮನವನ್ನು ಸೆಳೆಯುತ್ತದೆ. ಉದಾಹರಣೆಗಾಗಿ 'ಕ್ಯಾಮರಾ ಕೇಳುತ್ತಿತ್ತು, ನಗುತ್ತಿತ್ತು, ದೃಶ್ಯ ದೃಶ್ಯಾರ್ಥ ಗ್ರಹಿಸುವಂತೆ ಒಳಮನಸ್ಸಿನಲ್ಲಿ ಮಾತು ಮಾತಿನ ಪದಾರ್ಥವನ್ನೂ ಗ್ರಹಿಸಿದೆ ಎನ್ನುವಂತೆ' (ಅಂತರಾಳದ ಬದುಕು) ಎಂಬಲ್ಲಿ ನಿರ್ಜೀವ ಕೆಮರಾಕ್ಕೂ ಜೀವವಿದೆಯೇನೋ ಎನಿಸುವಂತೆ ಅವರು ಹೇಳಿರುವ ಸಾಲುಗಳು ಭಾಸವಾಗುತ್ತವೆ. 'ಸದ್ದಾಗದಂತೆ ಹಿತ್ತಿಲಿನ ಒದ್ದೆಮಣ್ಣನ್ನೆಲ್ಲ ಅಂಟಿಸಿಕೊಂಡ ಮೆಟ್ಟನ್ನು ನಾವು ಕಳಚುತ್ತಿದ್ದಂತೆ ವಾಣಿಮಾಯಿ ದಿಡದಿಡನೆ ಓಡಿದಳು', 'ನರಸಿಂಹ ಗಾಳಿಯಲ್ಲಿ ಹಾರಿದಂತೆ ಓಡಿಬಂದು ಒಂದು ಕೊಡಪಾನ ನೀರು ತಂದ. ಧೊಪಧೊಪ ಸುರಿದ' (ವಾಣಿಮಾಯಿ) ಎಂಬ ಈ ಸಾಲುಗಳಲ್ಲಿರುವ ಶಬ್ದಚಿತ್ರದ ಗುಣ ಕಾವ್ಯದ ಸಾಲುಗಳೇ ಅನಿಸುತ್ತದೆ. 'ಪಾರ್ಸಿನಲ್ಲಿ ರತ್ನನನ್ನು ಬಿಟ್ಟರಿಲ್ಲ. ಅವಳ ಜೀವ ಜೀವನದಲ್ಲಿ ಕುಳಿತಿರುವುದೇ ಇದರಿಂದಾಗಿ' (ನಟಿ) ಎಂಬ ಸಾಲುಗಳು ಕುಟುಂಬದ ಸಮಾರಂಭಗಳಲ್ಲಿ ಮಹಿಳೆಯರೆದುರು ಹಿರಿ–ಕಿರಿಯರೆಲ್ಲರ ಜೀವನವನ್ನು ನಟಿಸುತ್ತಿದ್ದ ರತ್ನಳ ಕುರಿತಾದ 'ನಟಿ' ಕತೆಯನ್ನೇ ಒಂದೇ ಸಾಲಿನಲ್ಲಿ ಹೇಳಿದಂತೆನಿಸುತ್ತದೆ. 'ಮನುಷ್ಯರ ವಾಸನೆ ಇಲ್ಲದವರು', 'ಈಚೆಯಲ್ಲಿದ್ದೂ ಆಚೆಮನೆಯಲ್ಲೇ ಇರುವ ಸಬಿತಾ', (ಸಬಿತಾ) ಎಂಬ ಈ ಸಾಲುಗಳು ಗದ್ಯವೂ ಕಾವ್ಯಗುಣವನ್ನು ಹೊಂದಿ ಕಿರಿದರಲ್ಲಿ ಹಿರಿದರ್ಥವನ್ನು ಹೊಳೆಯಿಸುವಂಥವುಗಳಾಗಿವೆ. ನಿತ್ಯವಿರಹಿ ಭಟ್ಟರಲ್ಲವೇ? (ಕ್ರೌಂಚಪಕ್ಷಿಗಳು) ಎಂಬಲ್ಲಿ ಭಟ್ಟರ ಹೆಸರೇ ಮರೆತು ಜನರಿಟ್ಟಿರುವ ಹೆಸರನ್ನೇ ಕಾವ್ಯಾತ್ಮಕವಾಗಿ ತಿಳಿಸಲಾಗಿದೆ. 'ಕಣ್ಣುಮುಚ್ಚಿದರೆ ಎಲ್ಲರೂ ಎಷ್ಟು ಪಾಪದವರ ಹಾಗೆ ಕಾಣುತ್ತಾರೆ ನೋಡು', 'ಮಾತೆಂಬುದೇ ನೆನಪಿನ ತಿಜೋರಿಯ ಬೀಗದಕೈ ಅಷ್ಟೆ?', 'ವಯಸ್ಸಾದ ಮೇಲೆ ಕಣ್ಣು ಕಿವಿ ಕಾಲು ಹೋಗುವುದು ಎಲ್ಲ ಸಾಮಾನ್ಯ, ಕಂಡದ್ದು, ಕೇಳಿದ್ದು, ಓಡಾಡಿದ್ದು ಇನ್ನು ಸಾಕು ಅಂತ ದೇವರು ನಿಧಾನವಾಗಿ ಒಂದೊಂದನ್ನೇ ವಾಪಾಸು ತೆಗೆದುಕೊಳ್ಳುತ್ತಾನೆ' ಮಾನವ ತನ್ನ ಮನಸಿನಂತೆ ಇತತರನ್ನು ನೋಡುವ, ತನ್ನ ನೆನಪುಗಳನ್ನು ಹಂಚಿಕೊಳ್ಳುವ ಮತ್ತು ತನ್ನ ಎಣಿಕೆಗೆ ಸಿಗುವ ದೇವರ ಕುರಿತಾದ ಅನಿಸಿಕೆಗಳನ್ನು ಸಾಟಿ ಮಾನವರೊಂದಿಗೆ ಹಂಚಿಕೊಳ್ಳುವ ರೀತಿ ಇವುಗಳನ್ನು ಕಾವ್ಯಾತ್ಮಕವಾಗಿ ನಿರೂಪಿಸುತ್ತಾರೆ. ಇಂತಹಾ ಅದೆಷ್ಟೋ ಕಾವ್ಯಮಯ ಧಾಟಿಯ ವಾಕ್ಯಗಳು ಅವರ ಉಳಿದ ಕತೆಗಳಲ್ಲೂ ಕಂಡುಬರುತ್ತವೆ. ಈ ರೀತಿಯಾಗಿ ಗದ್ಯದೊಂದಿಗೆ ಕಾವ್ಯಗುಣವೂ ಅವರ ಕತೆಗಳಲ್ಲಿ ಗಮನಸೆಯುತ್ತದೆ.

### ವ್ಯಕ್ತಿಗಳ ಗುಣವೈಚಿತ್ರ್ಯ ಸಾರುವ ಕತೆಗಳು

ಬಾಲ್ಯದಿಂದ ಇಲ್ಲಿಯವರೆಗೆ ತಮ್ಮ ಸುತ್ತಲಿನ ಸಮಾಜದಲ್ಲಿ ತಾವು ಕಂಡಿರುವ ಹಾಗೂ ಕಾಣುತ್ತಿರುವ ಬಗೆಬಗೆಯ ಸ್ತ್ರೀಮಾದರಿಗಳ ಜೀವನ ಚಿತ್ರಣವನ್ನು ವೈದೇಹಿ ಪ್ರತ್ಯೇಕ ಕತೆಗಳನ್ನಾಗಿಸಿದ್ದಾರೆ. 'ಮರಗಿಡಬಳ್ಳಿ' ಕತೆಯ ಮೂರು ಮಕ್ಕಳ ತಾಯಿಯಾದ ಮಂದಕ್ಕನೆಂಬ ವೃದ್ಧೆ ತನ್ನ ಮಕ್ಕಳಿಂದ ತ್ಯಜಿಸಲ್ಪಡುವ ಸನ್ನಿವೇಶ, 'ಅಕ್ಕು' ಕತೆಯಲ್ಲಿ ಗಂಡನಾದವನು ಹೆಂಡತಿಯನ್ನು ತೊರೆದು ನಾಪತ್ತೆಯಾದಾಗ ಆಕೆ ತವ–ರಿಗೆ ಬಂದರೆ ಅನುಭವಿಸಬೇಕಾದ ತಾತ್ಸಾರ, 'ವಾಣಿಮಾಯಿ' ಮತ್ತು 'ಅಮ್ಮಚ್ಚಿಯೆಂಬ ನೆನಪು' ಕತೆಗಳಲ್ಲಿ ಬಹುತೇಕ ಕುಟುಂಬದೊಳಗಿನ ಪುರುಷನಿಂದಾಗುವ ಸ್ತ್ರೀ ಶೋಷಣೆ ಎಂಬ ಒಂದೇ ವಸ್ತುವನ್ನು ತೆಗೆದುಕೊಂಡೂ ಅದನ್ನು ವಿಭಿನ್ನವಾಗಿ ವೈದೇಹಿಯವರು ನಿರ್ವಹಿಸಿರುವ ರೀತಿ, 'ಸಬಿತಾ' ಕತೆಯಲ್ಲಿ ತನ್ನನ್ನು ಬಿಟ್ಟು ಲೋಕದ ಎಲ್ಲರಿಗೂ ಬೇಕಾದ್ದು ಸಿಕ್ಕಿದೆ ಎಂದು ಕೊರಗುತ್ತಾ– ಅವರಿವರ ಕುರಿತು ಕೊಂಕುಮಾತುಗಳಲ್ಲೇ ಸಮಯ ಕಳೆಯುವ ಹೆಣ್ಣು ಸಬಿತಾ. ಎಲ್ಲರ ಜೀವನವನ್ನೂ ಅಭಿನಯಿಸುತ್ತಾ ತನ್ನ ಜೀವನವನ್ನೇ ಸರಿಯಾಗಿ ಬದುಕಲಾರದ 'ನಟಿ' ಕತೆಯ ರತ್ನ, ಶೀಲವೆಂಬುದು ಹೆಣ್ಣಿಗೆ ಮಾತ್ರ ಎಂಬ ಅಲಿಖಿತ ನಿಯಮದಿಂದಾಗಿ ಪರಿಚಯಸ್ಥರೇ ದೇಶ ವಿಭಜನೆಯ ಸಮಯದಲ್ಲಿ ಹೆಂಡತಿಯನ್ನು ಎತ್ತಿಕೊಂಡು ಹೋದರೆಂಬ ಕಾರಣಕ್ಕೆ ಆಕೆಯನ್ನು ತ್ಯಜಿಸಿ ಬೇರೊಬ್ಬಳನ್ನು ಮದುವೆಯಾದ 'ಕ್ರೌಂಚ ಪಕ್ಷಿಗಳು' ಕತೆಯ ಅಡುಗೆ ಭಟ್ಟರು, ಕಣ್ಣಿನ ಪರೀಕ್ಷೆಗೆ ಆಸ್ಪತ್ರೆಗೆ ಬಂದದ್ದೇ ನೆಪವಾಗಿ ಅಲ್ಲಿ ಕಂಡವರ ಮೊಗದಲ್ಲಿ ಇನ್ನಾರನ್ನೋ ಹುಡುಕಿ ಹಲವು ಕತೆಗಳಿಗೆ ಬಾಯಾದ 'ಕತೆ ಕತೆ ಕಾರಣ'ದ ಸರಸೋತತ್ತೆ, ಇವರೆಲ್ಲರೂ ಒಬ್ಬನೇ ಮನುಷ್ಯನಲ್ಲಿರಬಹುದಾದ ಹಲವು ಗುಣಗಳನ್ನು ಅಥವಾ ಹಲವು ಮನುಷ್ಯರುಗಳಲ್ಲಿ ಇರಬಹುದಾದ ಪ್ರತ್ಯೇಕ ಗುಣಗಳನ್ನು ಪ್ರತಿನಿಧಿಸುವಂತಿದ್ದಾರೆ.

### ಕತೆಗಳ ಪ್ರಸ್ತುತತೆ

ವೈದೇಹಿ ಅತ್ಯಂತ ವೈಯಕ್ತಿಕ ಅನುಭವವನ್ನು ಸಾರ್ವತ್ರಿಕಗೊಳಿಸುವ ಕವಿ, ಅವರು ನವೋದಯ, ನವ್ಯ, ದಲಿತ ಬಂಡಾಯ

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ಯಾವುದೇ ಪಂಥಕ್ಕೂ ಸೇರದ ಕವಿ ಎಂದು ಸುಮತೀಂದ್ರ ನಾಡಿಗರು ಹೇಳುತ್ತಾರೆ. ಅಂತೆಯೇ ಸರಳ ವಾಕ್ಯಗಳಲ್ಲಿ ಸುಲಭವಾಗಿ ಅರ್ಥವಾಗುವಂತೆ ಜನತೆಯ ಭಾವನೆಗಳನ್ನು, ಅವರ ದೇಹ ಮತ್ತು ಮನಸುಗಳ ಮೇಲಾಗುತ್ತಿರುವ ಶೋಷಣೆಯನ್ನು ಮನಕ್ಕೆ ತಟ್ಟುವಂತೆ ವೈದೇಹಿ ಚಿತ್ರಿಸುತ್ತಾರೆ.

ನವವಸಾಹತೀಕರಣದ ಈ ಸಂದರ್ಭದಲ್ಲಿ ಪ್ರದೇಶದ ಗುರುತುಗಳನ್ನು ಅರಿಯುವುದು ಮುಖ್ಯವಾಗಿರುವಾಗ ಕುಂದಗನ್ನಡದ ಆಡುನುಡಿಯನ್ನು ಬಳಸಿ ರಚಿಸಿದ ವೈದೇಹಿಯವರ ಸಾಹಿತ್ಯವು ಈ ದೃಷ್ಟಿಯಿಂದ ಗಮನಾರ್ಹವಾಗಿದೆ. ಸಮಾಜವೊಂದರಲ್ಲಿ ನಮ್ಮ ಅಕ್ಕಪಕ್ಕದಲ್ಲಿ ನಡೆಯುವ ಘಟನೆಗಳನ್ನೇ ಇವರು ಕತೆಯಾಗಿಸುತ್ತಾರೆ. ಮತ್ತು ಕತೆಗಳ ಮೂಲಕ ಓದುಗರ ಮನಸ್ಸನ್ನು, ಆ ಮೂಲಕ ಸಮಾಜವನ್ನೂ ತಿದ್ದುವ ಕೆಲಸ ಮಾಡುತ್ತಾರೆ. ಹೀಗಾಗಿಯೇ ಕಲ್ಪನೆಯಲ್ಲಿ ತೇಲಿಸಿ ಮುಳುಗಿಸುವ ಹೊಸಗನ್ನಡದ ಅನೇಕ ಬರಹಗಾರ್ತಿಯರಿಗಿಂತ ವೈದೇಹಿಯವರು ವಿಭಿನ್ನರಾಗಿದ್ದಾರೆ.

ಯಂತ್ರಗಳ ಮೂಲಕ ಹೊರಹೊಮ್ಮಿದ ತಂತ್ರಜ್ಞಾನದಿಂದಾಗಿ ಜಗತ್ತೇ ಅಂಗೈಯಲ್ಲಿ ದೊರೆಯುತ್ತಿರುವ ಜಾಗತೀಕರಣದ ಯುಗದಲ್ಲಿ ಮಾನವರಾಗಿರುವ ನಾವು ನಮ್ಮೊಳಗಿನ ಮಾನವೀಯತೆಯನ್ನು ಕಳೆದುಕೊಳ್ಳದೇ ಸದಾ ಎಚ್ಚರದಲ್ಲಿರಲು ಸಾಹಿತ್ಯ ಸಹಾಯಮಾಡುವ ಈ ಹೊತ್ತಿನಲ್ಲಿ ತಮ್ಮ ಕತೆಗಳಲ್ಲಿ ಮಾನವತೆಯ ಮೂಲಕ ಭೂತ–ವರ್ತಮಾನ– ಭವಿಷ್ಯದ ಕಾಣ್ಕೆಯನ್ನು ನೀಡುವ ವೈದೇಹಿಯವರು ಓದುಗರ ಮನದಲ್ಲಿ ಸದಾ ಸಾಮಾಜಿಕ ಕಾಳಜಿಯನ್ನು ತುಂಬುತ್ತಾ ಉತ್ತಮ ಪ್ರಜೆಗಳಾಗಲು ಪ್ರೇರೇಪಿಸುತ್ತಾರೆ.

**ಆಕರ ಗ್ರಂಥಗಳು:**

1. ವೈದೇಹಿ, 2000, ಅಮ್ಮಚ್ಚಿಯೆಂಬ ನೆನಪು, ಅಕ್ಷರ ಪ್ರಕಾಶನ, ಹೆಗ್ಗೋಡು.
2. ವೈದೇಹಿ, 2005, ಕ್ರೌಂಚ ಪಕ್ಷಿಗಳು, ಅಕ್ಷರ ಪ್ರಕಾಶನ, ಹೆಗ್ಗೋಡು.
3. ವೈದೇಹಿ, 2013, ಕತೆ ಕತೆ ಕಾರಣ, ಅಕ್ಷರ ಪ್ರಕಾಶನ, ಹೆಗ್ಗೋಡು.

**ಪರಾಮರ್ಶನ ಗ್ರಂಥಗಳು:**

1. ಮುರಳೀಧರ ಉಪಾಧ್ಯ ಹಿರಿಯಡಕ (ಸಂ), 2018, ವೈದೇಹಿ ಜೀವನ ಮತ್ತು ಕೃತಿಗಳ ಸಮೂಹ ಶೋಧ
2. ಅಶೋಕ ಟಿ.ಪಿ, 2013, ವೈದೇಹಿ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು.
3. ತಾರಿಣಿ ಶುಭದಾಯಿನಿ ಮತ್ತು ಸವಿತಾ ನಾಗಭೂಷಣ (ಸಂ.), 2019, ಇರುವಂತಿಗೆ, ವೈದೇಹಿ ಗೌರವ ಗ್ರಂಥ ಸಮಿತಿ, ಶಿವಮೊಗ್ಗ.